ರಾಜಕುಮಾರಿ, ನನ್ನ ಕೋಣೆಯಲ್ಲಿರುವ ಅಪೂರ್ವ ಸಂಪತ್ತನ್ನು ನೋಡು ಬಾ' ಎಂದು ಅವಳನ್ನು ಒಳಕ್ಕೆ ಕರೆದೊಯ್ದನು. ಹಡಗಿನ ಅಟ್ಟದ ಮೇಲೆ ಉಳಿದಿದ್ದ ಜಾನ್ ಕೂಡಲೇ 'ಬೇಗ ಬೇಗ ಹಡಗು ಮುಂದೆ ಸಾಗಲಿ, ಗಾಳಿಯಲ್ಲಿ ಹಕ್ಕಿ ಹಾರುವಂತೆ, ಅಲೆಗಳ ಮೇಲೆ ಹಾರಲಿ, ಬೇಗ ಬೇಗ' ಎಂದು ಅವಸರಿಸಿದನು. ಇತ್ತ ರಾಜಕುಮಾರ ತನ್ನ ಹಡಗಿನ ಕೋಣೆಯಲ್ಲಿ ಅತಿ ಸುಂದರವಾದ ಚಿನ್ನದ ಬೊಂಬೆ ಹಕ್ಕಿ, ಪ್ರಾಣಿಗಳನ್ನು ಒಂದೊಂದಾಗಿ ಅವಳಿಗೆ ತೋರಿಸುತ್ತಿದ್ದನು. ಅವೆಲ್ಲವನ್ನೂ ನೋಡಿ ನಿಧಾನವಾಗಿ ಅವಳು ಹಡಗಿನ ಕಟ್ಟೆಗೆ ಬಂದಾಗ, ಹಡಗು ಅವಳ ದೇಶವನ್ನು ಬಿಟ್ಟು ದೂರ ಸಾಗಿತ್ತು. ಅದನ್ನು ಕಂಡು ರಾಜಕುಮಾರಿ, 'ಅಯ್ಯೋ ನಾನೊಬ್ಬ ಕಳ್ಳವ್ಯಾಪಾರಿಯ ಕೈಗೆ ಸಿಕ್ಕಿಬಿದ್ದೆನಲ್ಲ! ಅದರ ಬದಲು ಸತ್ತಾದರೂ ಹೋಗಿದ್ದರೆ ಚೆನ್ನಾಗಿತ್ತು' ಎಂದು ಜೋರಾಗಿ ಕೂಗುತ್ತ ದುಃಖಿಸಲಾರಂಭಿಸಿದಳು. ರಾಜಕುಮಾರ ಅವಳ ಕೈ ಹಿಡಿದು ಸಂತೈಸುತ್ತ,

'ನಾನು ಕಳ್ಳ ವ್ಯಾಪಾರಿಯಲ್ಲ. ನಿನ್ನಂತೆಯೇ ಒಬ್ಬ ರಾಜಕುಮಾರ. ನನ್ನನ್ನು ನಂಬು. ನನ್ನ ತಂದೆಯ ಅರಮನೆಯಲ್ಲಿ ನಿನ್ನ ಚಿತ್ರವನ್ನು ಕಂಡು ಮೋಹಿತನಾಗಿ, ಹೇಗಾದರೂ ನಿನ್ನನ್ನು ಪಡೆಯಬೇಕೆಂಬ ಮಹದಾಸೆಯಿಂದ ಈ ಸಾಹಸ ಮಾಡಬೇಕಾಯಿತು' ಎನ್ನುತ್ತಲೂ, ರಾಜಕುಮಾರಿಗೆ ಸಮಾಧಾನವಾಗಿ ಅವಳಿಗೂ ಅವನಲ್ಲಿ ಪ್ರೇಮವುಂಟಾಯಿತು.

ಅವರೆಲ್ಲರೂ ಹೀಗೆ ಪ್ರಯಾಣ ಹೊರಟಾಗ ಹಡಗಿನ ಕಟ್ಟೆಯ ಮೇಲೆ ಮೂರು ಕಡಲ ಕಾಗೆಗಳು ಬಂದು ಕುಳಿತು ಮಾತಾಡಿಕೊಳ್ಳುವುದು ಜಾನ್‌ನ ಕಿವಿಗೆ ಬಿದ್ದಿತು. ಅವನಿಗೆ ಹಕ್ಕಿಗಳ ಭಾಷೆ ಚೆನ್ನಾಗಿ ಅರ್ಥವಾಗುತ್ತಿತ್ತು. 'ನೋಡು, ಕಡೆಗೂ ರಾಜಕುಮಾರ ಅವಳೊಂದಿಗೆ ಅರಮನೆಗೆ ಹಿಂದಿರುಗುತ್ತಿದ್ದಾನೆ' ಎಂದಿತು ಮೊದಲನೆ ಕಾಗೆ.

'ಆದರೇನು? ಅವಳು ಅವನಿಗೆ ದಕ್ಕುವುದಿಲ್ಲ. ಅವನು ಹಡಗಿನಿಂದ ಇಳಿದು ನೆಲದ ಮೇಲೆ ಕಾಲೂರುತ್ತಲೇ ಆಕಾಶದಿಂದ ಕೆಂಪು ಕುದುರೆಯೊಂದು ಅವನ ಮುಂದೆ ಇಳಿಯುತ್ತದೆ. ಅವನೇನಾದರೂ ಅದನ್ನೇರಿದರೆ ಅದು ಅವನನ್ನು ಆಕಾಶಕ್ಕೆ ಕೊಂಡೊಯ್ಯುತ್ತದೆ. ಮತ್ತೆ ಅವನಿಗೆ ರಾಜಕುಮಾರಿಯ ದರ್ಶನ ಎಂದೂ ಆಗುವುದಿಲ್ಲ' ಎಂದಿತು ಎರಡನೆಯ ಕಾಗೆ.

'ಆದರೆ ಯಾರಾದರೂ ಆ ಕುದುರೆಯನ್ನು ಕಂಡಕೂಡಲೇ ಕಡಿದು ಹಾಕಿದರೆ ರಾಜಕುಮಾರ ಉಳಿಯುತ್ತಾನೆ. ಆದರೆ ಕೊಂದವನು ಅದಕ್ಕೆ ಕಾರಣ ಹೇಳಿದರೆ ಅವನು ಕಾಲಿನಿಂದ ಮಂಡಿಯವರೆಗೆ ಕಲ್ಲಾಗುತ್ತಾನೆ' ಎಂದಿತು ಮೂರನೆ ಕಾಗೆ.

'ಹೌದು, ಹಾಗೆ ಒಂದು ವೇಳೆ ಬದುಕಿದರೂ ರಾಜಕುಮಾರನಿಗೆ ಇನ್ನೊಂದು ಗಂಡಾಂತರ ಇದೆ. ಅವನು ಅರಮನೆಯಲ್ಲಿ ಆಸನದ ಮೇಲೆ ಇಟ್ಟಿರುವ ಮದುವೆಯ ಉಡುಪನ್ನು ತೊಟ್ಟ ಕೂಡಲೇ ಅದಕ್ಕೆ ಬೆಂಕಿ ಹತ್ತಿ ಅವನನ್ನು ಸುಟ್ಟುಬಿಡುತ್ತದೆ. ಅದನ್ನು ಬರೀ ಗಂಧಕದಿಂದ ತಯಾರಿಸಿದೆ. ಅವನು ಅದನ್ನು ತೊಡುವ ಮೊದಲೇ ಯಾರಾದರೂ ಅದನ್ನು ಬೆಂಕಿಗೆ ಎಸೆದು ಬಿಟ್ಟರೆ ರಾಜಕುಮಾರ ಪಾರಾಗುತ್ತಾನೆ. ಆದರೆ ಹಾಗೆ ಮಾಡುವವನು ಅದಕ್ಕೆ ಕಾರಣ ಉಸುರಿದರೆ ಅವನು ಮಂಡಿಯಿಂದ ಎದೆಯವರೆಗೆ ಕಲ್ಲಾಗುತ್ತಾನೆ' ಎಂದಿತು ಎರಡನೆ ಕಾಗೆ.

'ಅಷ್ಟೇ ಅಲ್ಲ. ನನಗೆ ಇನ್ನೂ ಗೊತ್ತು ಕೇಳಿ. ಮದುವೆಯ ರಾತ್ರಿ ನಡೆಯುವ ನೃತ್ಯ ಕೂಟದಲ್ಲಿ ರಾಜಕುಮಾರಿ ಇದಕ್ಕಿದ್ದಂತೆ ಬಿಳಿಚಿಕೊಂಡು ಜ್ಞಾನತಪ್ಪಿ ಬೀಳುತ್ತಾಳೆ. ಅವಳನ್ನು ತಕ್ಷಣ ಎತ್ತಿ, ಯಾರಾದರೂ ಅವಳ ದೇಹದಿಂದ ಮೂರು ಹನಿ ರಕ್ತ ಹೀರದಿದ್ದರೆ ರಾಜಕುಮಾರಿ ತಕ್ಷಣ ಸಾಯುತ್ತಾಳೆ. ಹಾಗೆ ಮಾಡಿದವರು ಅದಕ್ಕೆ ಕಾರಣ ಹೇಳಿದ ಕೂಡಲೇ ಎದೆಯಿಂದ